(ಈ) ಹಾಗಿದ್ದರೆ, ಈ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ ?

ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು (ಶ್ರೀ ಎಚ್. ಎಂ. ಚನ್ನಬಸಪ್ಪ).—

ಉತ್ತರ.— (ಅ) ಬಂದಿದೆ.

(ಆ) ಗ್ರಾಮಾಂತರ ವಿದ್ಯುತ್ತೀಕರಣವನ್ನು ತಾಂತ್ರಿಕ ಸಾಧ್ಯತೆ, ಪ್ರಮುಖ ವಿದ್ಯುತ್ ಮಾರ್ಗದಿಂದ ಗ್ರಾಮವು ಹತ್ತಿರವಿರುವುದು, ಆರ್ಥಿಕ ದೃಷ್ಟಿ ಮುಂತಾದ ಆಧಾರಗಳ ಮೇಲೆ ಕೈಕೊಳ್ಳಲಾಗುತ್ತದೆ. ಇದು ಬೃಹದಾಕಾರದ ಸಮಸ್ಯೆಯಾಗಿದ್ದು ಇದನ್ನು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರ ಸಂಪನ್ಮೂಲಕ್ಕೊಳಪಟ್ಟು ವಿದ್ಯುತ್ತೀಕರಣವನ್ನು ಹಂತ ಹಂತವಾಗಿ ಕೈಕೊಳ್ಳಬೇಕಾಗಿದೆ. ಸದರಿ ಗ್ರಾಮಗಳ ಸಮೀಕ್ಷೆಯು ಮೇಲ್ಕಂಡ ಪರತ್ಯಾಗಳನ್ನು ಪೂರೈಸಿದ್ದಲ್ಲಿ ಅವುಗಳಿಗೆ ವಿದ್ಯುತ್ ಉಪಮಾರ್ಗಗಳನ್ನು ನಿರ್ಮಿಸುವ ಮೂಲಕ ಅಲ್ಲಿ ವಿದ್ಯುಚ್ಛಕ್ತಿ ಪೂರೈಸಲಾಗುತ್ತಿದೆ.

(ಇ) ಬಂದಿದೆ.

(ಈ) ಪ್ರಶ್ನೆಯ (ಅ) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

HEALTH UNIT AT GOJARKOT IN GURMITKAL CONSTITUENCY

SRI MALLIKARJUNA KHARGE (Gurmitkal).—

55. (68) Will the Minister for Helth be pleased to state :—

(*a*) whether there is any proposal to establish a health unit at village Gojarkot in Gurmitkal Constituency ;

(*b*) if not, the reasons for the same ?

SRI H. SIDDAVEERAPPA (Minister for Health).—

(*a*) No.

(*b*) There is no request either from the Local Bodies or from the Public for sanction of a Health Unit type Dispensary at Gojarkot in Gurmitkal Constituency.

APPROACH ROADS IN GURMITKAL CONSTITUENCY

SRI MALLIKARJUNA KHARGE (Gurmitkal).—

56. (69) Will the Minister for Public Works and Electricity be pleased to state :—

(*a*) the number of villages which have no approach roads in Gurmitkal Constituency ;

(*b*) the number of approach roads proposed to be constructed in Gurmitkal Constituency during the year 1972-73 ?

SRI H. M. CHANNABASAPPA (Minister for Public Works and Electricity)

(*a*) Fifty-six.

(*b*) Depends upon the availability of funds.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

೫೭. (೭೫) ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಮೂಡಿಗೆರೆ ತಾಲ್ಲೂಕಿನ ಬಿಳಿಗಲಿ ಗ್ರಾಮದ ಪ್ರೈಮರಿ ಹೆಲ್ತ್ ಯೂನಿಟ್ ಕಟ್ಟಡಕ್ಕೆ ಯಾವಾಗ ದುರಸ್ತಿಮಾಡಲಾಗಿತ್ತು ;

(ಆ) ಈಗ ಆ ಕಟ್ಟಡ ಬಹಳ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

(ಇ) ಈ ಕಟ್ಟಡಕ್ಕೆ ಸರ್ಕಾರವು ಯಾವಾಗ ದುರಸ್ತಿ ಮಾಡಿಸಬೇಕೆಂದು ಉದ್ದೇಶಿಸಿದೆ ?

ಶ್ರೀ ಎಚ್. ಸಿದ್ದವೀರಪ್ಪ. (ಆರೋಗ್ಯ ಮಂತ್ರಿಗಳು).—

ಉತ್ತರ .— (ಅ) ಮೂಡಿಗೆರೆ ತಾಲ್ಲೂಕಿನ ಬಿಳಿಗಲಿ ಗ್ರಾಮದಲ್ಲಿ ಪ್ರೈಮರಿ ಹೆಲ್ತ್ ಯೂನಿಟ್ ಇಲ್ಲ. ಆದರೆ ಬಿಳಿಗಲಿ ಗ್ರಾಮವು ಹಿರೆಬಯಲೆ ಪ್ರೈಮರಿ ಹೆಲ್ತ್ ಯೂನಿಟ್‌ಗೆ ಸೇರಿದ್ದು ಮೂಡಿಗೆರೆ ತಾಲ್ಲೂಕಿನಲ್ಲಿದೆ. ಹಿರೆಬಯಲೆ ಪ್ರೈಮರಿ ಹೆಲ್ತ್ ಯೂನಿಟ್ ಕಟ್ಟಡ ಸುಮಾರು ೬ ವರ್ಷಗಳ ಹಿಂದೆ ದುರಸ್ತಿ ಮಾಡಲಾಗಿತ್ತು.

(ಆ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ. (ಹಿರೆಬಯಲೆ ಪ್ರೈಮರಿ ಹೆಲ್ತ್ ಯೂನಿಟ್ ಕಟ್ಟಡ ಶಿಥಿಲವಾಗಿರುವುದು).

(ಇ) ಸದ್ಯದಲ್ಲೆ ದುರಸ್ತಿ ಮಾಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಲೋಕೋಪಯೋಗಿ ಇಲಾಖೆಯವರಿಗೆ ಕಟ್ಟಡವನ್ನು ತಾರೀಖು ೨೪ನೇ ಮೇ ೧೯೭೨ರಂದು ಒಪ್ಪಿಸಿದ್ದು ಅವಶ್ಯ ದುರಸ್ತಿಗಳನ್ನು ಮಾಡಲು ಕೇಳಿಕೊಳ್ಳಲಾಗಿದೆ.

MAINTENANCE OF N. H. No. 4

SRI B. G. BANAKAR (Hirekerur).—

58. (8) Will the Minister for Public Works and Electricity be pleased to state:—

(*a*) the various types and total number of officers or employees including the mile-coolies working on the National Highway No. 4;

(*b*) the total amount spent on the maintenace of this National Highway No. 4;

(*c*) the total number of trees and the number of tamarind trees alongside on this National Highway No. 4;

(*d*) the total number of trees felled or withered during the last three years up to the latest convenient date?

(SRI H. M. CHANNABASAPPA).— Minister for Public Works and Electricity

(*a*) Executive Engineers, Assistant Engineers, Junior Engineers Work Inspectors, Maistries, Mukadams, Mile Coolies and Drivers ..... 591.

(*b*) Rs. 28,72,590 during 1971-72.

(*c*) 40,464 out of which 8,474 are tamarind trees.

(*d*) 1,871 trees were cut or have withered, during the last three years.